ಸಿ. ಸಿ. ನಂ. **2526/2019**

ಪಿ ಡಬ್ಲ್ಯೂ: **1**

**ಸಾಕ್ಷಿಯು ದಿನಾಂಕಃ 18-01-2025 ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲುಃ ಆರೋಪಿ ಪರ ಶ್ರೀ ಕೆ ವಾಯ್., ವಕೀಲರಿಂದ**

ನಾನು ಹೂಡಾ ವಿರುದ್ಧ ದಾಖಲಿಸಿದ ದಾವೆಯಲ್ಲಿ ಆರೋಪಿಯನ್ನು ಪಕ್ಷಗಾರರನ್ನಾಗಿ ಸೇರಿಸಿಲ್ಲ. ನಾನು ಸ್ವತ್ತು ಆರೋಪಿಗೆ ಯಾವ ರೀತಿ ಬಂದಿತ್ತು ಎಂದು ಸಂಬಂಧಪಟ್ಟ ದಾಖಲೆಗಳನ್ನು ನೋಡಿ ನಂತರ ಖರೀದಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಭರವಸೆಯ ಮೇಲೆ ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

**2002** ರಲ್ಲಿ ಸ್ವತ್ತನ್ನು ವೆಂಕಟೇಶ ರವರಿಂದ ಪರಶುರಾಮ ರವರು ಖರೀದಿ ಮಾಡಿದ್ದು ನನಗೆ ಗೊತ್ತು ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರಕರಣ ದಾಖಲು ಮಾಡುವುದಕ್ಕೂ ಮೊದಲು ದಾಖಲೆಗಳನ್ನು ನೋಡಿ ಗೊತ್ತಾಯಿತು. ಆರೋಪಿ ಪರಶುರಾಮರವರಿಂದ **2006** ರಲ್ಲಿ ಸ್ವತ್ತನ್ನು ಖರೀದಿಸಿದ ಬಗ್ಗೆ ನನಗೆ ಗೊತ್ತಾಯಿತು ಅಂದರೆ ಸರಿ. ನನ್ನ ಗಂಡ ಸದರಿ ಸ್ವತ್ತಿನ ದಾಖಲೆಗಳನ್ನು ನೋಡಿ ಅವುಗಳು ಸರಿ ಇದ್ದದ್ದರಿಂದ ಆರೋಪಿಯ ಹೆಸರಿನಲ್ಲಿ ಸ್ವತ್ತುನ್ನು ಖರೀದಿಸಿದ್ದ ಅಂದರೆ ಸರಿಯಲ್ಲ. ಆರೋಪಿ ನನ್ನ ಗಂಡನ ಸಂಸ್ಥೆಯಿಂದ ಕೆಲಸ ಬಿಡುವಾಗ ನನ್ನ ಗಂಡ ಸ್ವತ್ತನ್ನು ನನ್ನ ಹೆಸರಿಗೆ ಮಾಡಿಕೊಂಡಿರುತ್ತಾರೆ ಅಂದರೆ ಸರಿಯಲ್ಲ. ನನಗೆ ಸ್ವತ್ತನ್ನು ಮಾರಾಟ ಮಾಡಿ ಮೋಸ ಮಾಡುವ ಯಾವುದೇ ಉದ್ದೇಶ ಆರೋಪಿಗೆ ಇರಲಿಲ್ಲ ಅಂದರೆ ಸರಿಯಲ್ಲ. ನನ್ನ ಗಂಡನಿಗೂ ಮತ್ತು ಆರೋಪಿಗೂ ವ್ಯತ್ಯಾಸಗಳು ಬಂದಿದ್ದರಿಂದ ಅವರ ಮೇಲಿನ ದ್ವೇಷದಿಂದ ಸುಳ್ಳು ದೂರನ್ನು ನೀಡಿರುತ್ತೇನೆ ಅಂದರೆ ಸರಿಯಲ್ಲ.

ಸಿ. ಸಿ. ನಂ. **2526/2019**

ಪಿ ಡಬ್ಲ್ಯೂಃ **1**

ಆರೋಪಿ ಯಾವುದೇ ತಪ್ಪು ಮಾಡದಿದ್ದರೂ ಸಹ ಆತನ ಮೇಲೆ ದ್ವೇಷ ಸಾಧಿಸಲು ಈ ರೀತಿ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.